ಅಸಲು ದಾವಾ  ಸಂಖ್ಯೆ 190/2023

ಪಿ ಡಬ್ಲ್ಯೂಃ 1

**<u>ದಿನಾಂಕ : 03.06.2026ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ – ಪ್ರತಿವಾದಿಗಳ  ಪರವಾಗಿ ಶ್ರೀ ಎ ಆರ್ ಕೆ  ವಕೀಲರಿಂದಃ</u>**

ಪ್ರತಿವಾದಿಯ ತಂದೆ ಹಾಗೂ ಅವರ ತಾತ ನನಗೆ ಗೊತ್ತು. ಜಯಲಕ್ಷ್ಮಮ್ಮರವರು ಸ್ವತ್ತನ್ನು ಕ್ರಯಕ್ಕೆ ಪಡೆಯು ಮೊದಲು ದಾವಾ ಅನುಸೂಚಿತ ಸ್ವತ್ತು ಮೂಲತಃ ಪ್ರತಿವಾದಿಯ ತಾತನಿಗೆ ಸೇರಿದ ಸ್ವತ್ತು ಆಗಿತ್ತು ಎಂದರೆ ಸರಿ.  ಜಯಲಕ್ಷ್ಮಮ್ಮ ನನಗೆ 1964 ರಿಂದಲೂ ಪರಿಚಯಸ್ಥರಾಗಿರುತ್ತಾರೆ. ಅವರು ಮೂಲತಃ ಶಾಂತಿಗ್ರಾಮ ಗ್ರಾಮದವರು. ಅವರು ಅಲ್ಲಿಂದ ಇಲ್ಲಿಗೆ ಅಂಗನವಾಡಿ ಕೆಲಸಕ್ಕಾಗಿ ಬಂದಿರುತ್ತಾರೆ. ಅವರು ಅಂಗನವಾಡಿ ಶಿಕ್ಷಕರಾಗಿ ಕೆಲಸ ನಿರ್ವಹಿಸುತ್ತಿದ್ದರು. ಅವರು ತೆಳ್ಳನೂರು ಗ್ರಾಮದಲ್ಲಿಯೇ ವಾಸ ಇದ್ದರು.

ಅಸಲು ದಾವಾ  ಸಂಖ್ಯೆ 190/2023

ಪಿ ಡಬ್ಲ್ಯೂ: 1

ಅವರು ಊರನ್ನು ಬಿಟ್ಟು ಎಲ್ಲಿಗೂ ಹೋಗಿರಲಿಲ್ಲ. ಜಯಲಕ್ಷ್ಮಮ್ಮರವರ ತಂದೆ, ತಾಯಿಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಜಯಲಕ್ಷ್ಮಮ್ಮ ಮತ್ತು ಪ್ರತಿವಾದಿಯ ತಂದೆ ಲಿಂಗಯ್ಯನವರ ನಡುವೆ 1978 ರಲ್ಲಿ ನಡೆದ ವ್ಯವಹಾರದ ಬಗ್ಗೆ ನನಗೆ ಗೊತ್ತಿರುವುದಿಲ್ಲ.

ಜಯಲಕ್ಷ್ಮಮ್ಮರವರು ನನಗೆ ಉಯಿಲು ಬರೆದಿರುವುದಾಗಿ ತಿಳಿಸಿದ್ದು, ಸದರಿ ದಾಖಲಾತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಜಯಲಕ್ಷ್ಮಮ್ಮರವರು ವಿಲ್ ಬರೆದುಕೊಟ್ಟಿರುವುದಾಗಿ ಹೇಳಿ ನನ್ನ ಹೆಸರಿಗೆ ಖಾತೆ ಮಾಡಿಕೊಡುವಂತೆ ತಹಶೀಲ್ದಾರ್ ರವರಿಗೆ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ.  ಸದರಿ ಅರ್ಜಿಯ ಜೊತೆ ವಿಲ್, ಕಂದಾಯ ಪಾವತಿ ರಶೀದಿಗಳು ಹಾಗೂ ಆರ್ ಟಿ ಸಿ ಗಳನ್ನು ಕೊಟ್ಟಿದ್ದೆ. ಸದರಿ ಅರ್ಜಿಯ ಆಧಾರದ ಮೇರೆಗೆ ತಹಶೀಲ್ದಾರ್ ನನ್ನ ಹೆಸರಿಗೆ ಖಾತೆ ಮಾಡಿರುವುದಿಲ್ಲ ಎಂದರೆ ಸರಿ.  ತಹಶೀಲ್ದಾರ್ ರವರು  ಜಯಲಕ್ಷ್ಮಮ್ಮ ರವರ ಮರಣ ದೃಡೀಕರಣ ಪತ್ರವನ್ನು ಹಾಜರು ಪಡಿಸಿರುವುದಿಲ್ಲ ಎಂಬ ಕಾರಣದಿಂದ ಖಾತೆ ಮಾಡಿರುವುದಿಲ್ಲ. ಆ ನಂತರ ನ್ಯಾಯಾಲಯದ ಆದೇಶ ಪಡೆದು, ಮರಣ ದೃಡೀಕರಣ ಪತ್ರ ಪಡೆದು ಮತ್ತೊಮ್ಮೆ ಅಧಿಕಾರಿಗಳಿಗೆ ಸಲ್ಲಿಸಿಕೊಂಡಿದ್ದೆ. ಜಯಲಕ್ಷ್ಮಮ್ಮ ರವರ ಮರಣ ದೃಡೀಕರಣ ಪತ್ರ ಕೋರಿ ನ್ಯಾಯಾಲಯಕ್ಕೆ ಸಲ್ಲಿಸಿದ್ದ ಪ್ರಕರಣದ ಸಂಖ್ಯೆ ನನಗೆ ಗೊತ್ತಿಲ್ಲ. ಆದೇಶ ಪತ್ರ ಪಡೆದ ದಿನಾಂಕ ನನಗೆ ಗೊತ್ತು. ಜಯಲಕ್ಷ್ಮಮ್ಮ ಯಾವ ದಿನಾಂಕದಂದು ಮರಣ ಹೊಂದಿರುವುದಾಗಿ ಹಿಂಬರಹ ಪಡೆದಿರುತ್ತೀರಾ ಎಂದರೆ ಸಾಕ್ಷಿಯು, ಯಾವುದೇ ಹಿಂಬರಹ ಪಡೆದಿಲ್ಲ ಎಂದು ನುಡಿಯುತ್ತಾರೆ. ಜಯಲಕ್ಷ್ಮಮ್ಮ ರವರ ಮರಣ ದೃಡೀಕರಣ ಪತ್ರವನ್ನು ನಾನು ಈ ದಾವೆಯಲ್ಲಿ ಹಾಜರು ಪಡಿಸಿರುತ್ತೇನೆ.

ತಹಶೀಲ್ದಾರ್ ರವರು ಆದೇಶ ಮಾಡದೇ ಇರುವ ಕಾರಣ ಎ.ಸಿ. ರವರಿಗೆ ಅಪೀಲು ದಾಖಲು ಮಾಡಿದ್ದೆ ಎಂದರೆ ಸರಿ.  ನಾನು ಎ.ಸಿ. ರವರಿಗೆ ಮೂರು ವರ್ಷಗಳ ನಂತರ ಅಪೀಲು ದಾಖಲು ಮಾಡಿದ್ದೆ ಎಂದರೆ ಸಾಕ್ಷಿಯು, ಮರಣ ದೃಡೀಕರಣ ಪತ್ರ ಸಿಗುವವರಗೆ ನಾನು ಎ.ಸಿ. ರವರ ಸಮಕ್ಷಮ ಅಪೀಲು ಮಾಡಿರಲಿಲ್ಲ ಎಂದು ನುಡಿಯುತ್ತಾರೆ. ಎ.ಸಿ. ನ್ಯಾಯಾಲಯಕ್ಕೆ ವಿಲ್ ಮತ್ತು ಮರಣ ದೃಡೀಕರಣಪತ್ರವನ್ನು ಹಾಜರು ಪಡಿಸಿದ್ದೆ.

ಜಯಲಕ್ಷ್ಮಮ್ಮ ರವರು ತೆಳ್ಳನೂರು ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ. ನಮ್ಮ ಜಮೀನಿನಲ್ಲಿಯೇ ಅವರ ಶವಸಂಸ್ಕಾರ ಮಾಡಲಾಗಿತ್ತು. ಜಯಲಕ್ಷ್ಮಮ್ಮ ರವರು ಅವರ ಗ್ರಾಮಕ್ಕೆ ಹೋಗಿ ಮರಣ ಹೊಂದಿದ್ದು, ಅವರ ಸಂಬಂಧಿಕರು ಶವಸಂಸ್ಕಾರ ಮಾಡಿದ್ದರು ಎಂದರೆ ಸರಿಯಲ್ಲ. ಜಯಲಕ್ಷ್ಮಮ್ಮ ರವರ ಶವಸಂಸ್ಕಾರವನ್ನು ನಮ್ಮ ಜಮೀನಿನಲ್ಲಿಯೇ ಮಾಡಲಾಗಿತ್ತು ಎಂಬ ಬಗ್ಗೆ ಅಧಿಕೃತ ದಾಖಲಾತಿಯನ್ನು ಹಾಜರು ಪಡಿಸಲು ಸಾಧ್ಯವಿಲ್ಲ. ಜಯಲಕ್ಷ್ಮಮ್ಮ ನನ್ನ ಪರವಾಗಿ ಯಾವುದೇ ವಿಲ್ ಬರೆದುಕೊಟ್ಟಿಲ್ಲ , ನಾನು ಜಯಲಕ್ಷ್ಮಮ್ಮ ಬರೆದುಕೊಟ್ಟಿರುವುದಾಗಿ ಒಂದು ವಿಲ್ ಅನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ  ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ  ನನ್ನ ಉಕ್ತಲೇಖನದಿಂದ ಬೆರಳಚ್ಚು  ಪಡಿಸಲಾಯಿತು.)

ಓ ಹೇ ಕೇ ಸ ಇದೆ

( ಕಾವ್ಯಶ್ರೀ. ಎಂ )
ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ., ಕೊಳ್ಳೇಗಾಲ